ಸಾಕ್ಷಿಯನ್ನು ದಿನಾಂಕ 10-07-2023 ರಂದು ಪ್ರಮಾಣ ಮಾಡಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ 13 ನೇ ಪ್ರತಿವಾದಿ ಪರ ಶ್ರೀಮತಿ.ಜೆಪಿಡಿ ವಕೀಲರಿಂದಃ**

10 ರಿಂದ 13 ನೇ ಪ್ರತಿವಾದಿಯರು ದಾವಾ ಸ್ವತ್ತನ್ನು ಯಾವ ವರ್ಷ ಖರೀದಿ ಮಾಡಿದ್ದು ಎಂದರೆ 2000 ನೇ ಇಸ್ವಿಯ ಜುಲೈ ತಿಂಗಳಿನಲ್ಲಿ ಎಂದು ನುಡಿಯುತ್ತೇನೆ. ದಾವಾ ಆಸ್ತಿ ಕುರಿತಂತೆ ಎಷ್ಟು ಖರೀದಿ ಪತ್ರವಾಗಿದೆ ಎಂದು ಕೇಳಿದರೆ ಎರೆಡು ಖರೀದಿ ಪತ್ರ ಆಗಿದೆ ಎಂದು ನುಡಿಯುತ್ತೇನೆ. ರಟ್ಟಿಹಳ್ಳಿ ವಕೀಲರು ಜಿಪಿಎ ಮೂಲಕ ಸದರಿ ಖರೀದಿ ಪತ್ರ ಮಾಡಿಕೊಟ್ಟಿದ್ದು ಎಂದರೆ ನಿಜ. ಸದರಿ ಎರೆಡು ಖರೀದಿ ಪತ್ರದಲ್ಲಿ ಸಂಪೂರ್ಣ ಕ್ಷೇತ್ರ ಇತ್ತೇ ಎಂದರೆ ಹೌದು ಎಂದು ನುಡಿಯುತ್ತೇನೆ. ದಾವೆಯಲ್ಲಿ ಮಾಡಿರುವ 2 ನೇ ಮಾಗಣಿಯಲ್ಲಿ ಪ್ರತಿವಾದಿ ನಂ.10 ರಿಂದ 12 ರವರು ಖರೀದಿ ಮಾಡಿದ ಜಮೀನು ನಂ.627 ಎ/3 ಕುರಿತಂತೆ ಮಾಗಣಿ ಇದೆ ಎಂದರೆ ನಿಜ. ಸಾಕ್ಷಿ ಸ್ವತಃ ನುಡಿಯುತ್ತಾರೆ ಸದರಿ ಪ್ರತಿವಾದಿಗಳು ಎರೆಡು ಸ್ವತ್ತು ಖರೀದಿ ಮಾಡಿದ್ದು ಸದರಿ ಎರೆಡೂ ಸ್ವತ್ತುಗಳ ಕುರಿತಂತೆ ಮಾಗಣಿ ಮಾಡಿದ್ದೇವೆ. ಒಂದು ಖರೀದಿ ಪತ್ರವು ಉಪ ನೊಂದಣಿ ಕಚೇರಿಯ ಸಂಚಿಕೆ 1959 ರಲ್ಲಿ ನೊಂದಣಿಯಾದ ದಾಖಲೆ ಮತ್ತು ಇನ್ನೊಂದು ಸಂಚಿಕೆ 1964 ರಲ್ಲಿ ನೊಂದಣಿಯಾದ ದಾಖಲೆ ಎಂದರೆ ನೆನಪಿಲ್ಲ. ಸದರಿ 1959 ರ ಸಂಚಿಕೆಯಲ್ಲಿ ನೊಂದಣಿಯಾದ ದಾಖಲೆಯಡಿ ಪ್ರತಿವಾದಿ ನಂ.10 ರಿಂದ 1 ತಿರವರು ಖರೀದಿ ಮಾಡಿದ ಖರೀದಿ ಪತ್ರದಲ್ಲಿ ಏನು ಬರೆದಿದೆ ಎಂದು ಓದಿ ತಿಳಿದುಕೊಂಡಿದ್ದೇನೆಯೇ ಎಂದರೆ ಹೌದು ಎಂದು ನುಡಿಯುತ್ತೇನೆ. 627/ಎ/3 ದಲ್ಲಿ ಒಟ್ಟು ಎಷ್ಟು ಕ್ಷೇತ್ರ ಇತ್ತು ಎಂದರೆ 4 ಎಕರೆ 10 ಗುಂಟೆ ಇತ್ತು ಎಂದು ನುಡಿಯುತ್ತೇನೆ. ಸಾಕ್ಷಿ ಸ್ವತಃ ನುಡಿಯುತ್ತಾರೆ ಅದು ಆರ್ ಎಸ್ 627/3 ಆಗಿರುತ್ತೆ ಹೊರತು 627/ಎ/3 ಅಲ್ಲ. ಖರೀದಿ ಪತ್ರದಲ್ಲಿ ಪ್ರತಿವಾದಿ ನಂ.10 ರಿಂದ 12 ರವರು 4 ಎಕರೆ 10 ಗುಂಟೆ ಪೈಕಿ 2 ಎಕರೆ ಮಾತ್ರ ಖರೀದಿಸಿದ್ದು ಎಂದರೆ ನಮಗೆ ತಿಳಿದು ಬಂದಿರುವಂತೆ ಅವರು 4 ಎಕರೆ 10 ಗುಂಟೆ ಪೂರ್ತಿ ಖರೀದಿ ಮಾಡಿದ್ದಾರೆ ಎಂದು ನುಡಿಯುತ್ತೇನೆ. ಸದರಿ ಖರೀದಿ ಪತ್ರದಲ್ಲಿ 2 ಎಕರೆ ಮಾತ್ರ ಖರೀದಿ ಮಾಡಿದ್ದು ಎಂದರೆ ಒಟ್ಟು 4 ಖರೀದಿ ಪತ್ರವಾಗಿದ್ದು ಪೂರ್ತಿ ಕ್ಷೇತ್ರವನ್ನು ಖರೀದಿ ಮಾಡಿದ್ದಾರೆ ಎಂದು ನುಡಿಯುತ್ತೇನೆ. ಸದರಿ ನಾಲ್ಕು ಖರೀದಿ ಪತ್ರಗಳನ್ನು ದಾವೆಯ ಮಾಗಣಿಯಲ್ಲಿ ಕಾಣಿಸಿಲ್ಲ ಎಂದರೆ ಸರಿಯಲ್ಲ. 2003 ಏಪ್ರೀಲ್ ನಲ್ಲಿ ದಾವೆ ದಾಖಲಿಸಿದ್ದೆ. ಆ ಸಮಯದಲ್ಲಿ 4 ಖರೀದಿ ಪತ್ರ ಆಗಿರಲಿಲ್ಲ ಎಂದರೆ ಮೊದಲು ಎರೆಡು ಖರೀದಿ ಪತ್ರದ ಬಗ್ಗೆ ಮಾಗಣಿ

ಮಾಡಿದ್ದು ನಂತರ ಇನ್ನೂ ಎರೆಡು ಖರೀದಿ ಪತ್ರದ ಬಗ್ಗೆ ಮಾಗಣೆಯನ್ನು ಸೇರಿಸಲಾಗಿದೆ ಎಂದು ನುಡಿಯುತ್ತೇನೆ. ಯಾವ ವರ್ಷದಲ್ಲಿ ಆ ರೀತಿ ಸೇರಿಸಿದ್ದು ಎಂದು ಕೇಳಿದರೆ ಇದೇ ವರ್ಷ ಇರಬಹುದು, 2022 ಅಥವಾ 2023 ಇರಬಹುದು ಎಂದು ನುಡಿಯುತ್ತೇನೆ. ಪ್ರತಿವಾದಿಗಳು ಕೈಫಿಯತ್‌ನ್ನು ಯಾವ ವರ್ಷ ಸಲ್ಲಿಸಿದ್ದರು ಎಂದರೆ 2003 ರಲ್ಲಿ ಎಂದು ನುಡಿಯುತ್ತೇನೆ. ಸದರಿ ಕೈಫಿಯತ್‌ನಲ್ಲಿ ಹೇಳಿರುವಂತ ಕುರಿತಂತೆ ದಾಖಲೆಗಳನ್ನು ಪ್ರತಿವಾದಿಯರು ಸಲ್ಲಿಸಿದ್ದು ಅವುಗಳ ಬಗ್ಗೆ ನನಗೆ ಮಾಹಿತಿ ಇದೆಯೇ ಎಂದು ಕೇಳಿದರೆ ಇದೆ ಎಂದು ನುಡಿಯುತ್ತೇನೆ. ದಾಖಲೆ ಜೊತೆಗೆ ಅವರು ಒಟ್ಟು 4 ಖರೀದಿ ಪತ್ರಗಳನ್ನು ಒಟ್ಟಿಗೆ ಸಲ್ಲಿಸಿದ್ದರು ಎಂದರೆ ನಿಜ. 2003 ರಲ್ಲಿಯೇ ಆ ರೀತಿ ಇನ್ನೂ 2 ಖರೀದಿ ಪತ್ರಗಳನ್ನು ಮಾಗಣೆಯಲ್ಲಿ ಕಾಣಿಸದೇ ಇರುವ ಕುರಿತಂತೆ ಮಾಗಣೆ ಸೇರಿಸಬೇಕೆಂದು ಅನಿಸಲಿಲ್ಲವೇ ಎಂದರೆ ಆ ಸಮಯದಲ್ಲಿ ಅದು ಮರೆವು ಆಗಿತ್ತು ಎಂದು ನುಡಿಯುತ್ತೇನೆ. ಆರ್ ಎಸ್ ನಂ.627/3 ರಲ್ಲಿ ಪ್ರತಿವಾದಿ ನಂ.10 ರಿಂದ 12 ರವರು ಎನ್ ಎ ಮಾಡಿ, ಲೇಔಟ್ ಮಾಡಿಸಿ ಪ್ಲಾಟುಗಳಲ್ಲಿ ಮಾರಾಟ ಮಾಡಿಬಿಟ್ಟಿದ್ದಾರೆ ಎಂದರೆ ನಿಜ. ದಾವಾ ತಪಶೀಲು ಬಿ ಸ್ವತ್ತು ಅಂದರೆ 623/4 ಸಿ/1 ರಲ್ಲಿ 2 ಎಕರೆ 8 ಆಣೆ ಪೂರ್ತಿ ಸ್ವತ್ತು ವಿಮಾನ ನಿಲ್ದಾಣ ಉದ್ದೇಶಕ್ಕೆ ಭೂಸ್ವಾಧೀನಗೊಂಡಿದೆ ಎಂದರೆ ನಿಜ. ಸಾಕ್ಷಿ ಸ್ವತಃ ನುಡಿಯುತ್ತಾರೆ ಆನಂತರ ಆ ವಿಚಾರ ಗೊತ್ತಾಯಿತು. ಹಾಗೂ ನಾವು ಖರೀದಿ ಮಾಡುವಾಗ ಯು ಎಲ್ ಸಿ ಕಾಯ್ದೆ ಅಡಿ ಅದು ಎಕ್ಸೆಸ್ ಲ್ಯಾಂಡ್ ಎಂದು ಪರಿಗಣಿಸಲ್ಪಟ್ಟಿತ್ತು. ನಾವು ಖರೀದಿ ಮಾಡಿರುವುದೇ ಅಥವಾ ಖರೀದಿ ಸಂಚಕಾರ ಮಾಡಿಕೊಂಡಿರುವುದೇ ಎಂದು ಕೇಳಿದರೆ ಖರೀದಿ ಸಂಚಕಾರ ಎಂದು ನುಡಿಯುತ್ತೇನೆ. ಅದು ನೊಂದ ಸಂಚಕಾರ ಪತ್ರ ಅಲ್ಲ ಎಂದರೆ ನಿಜ. ಸಾಕ್ಷಿ ಸ್ವತಃ ನುಡಿಯುತ್ತಾರೆ ನೋಟರಿ ಮಾಡಲಾಗಿದೆ. ಸದರಿ ಸಂಚಕಾರ ಪತ್ರಕ್ಕೆ ಎಲ್ಲ ಮಾಲೀಕರು ಸಹಿ ಮಾಡಿಲ್ಲ ಎಂದರೆ ಇಬ್ಬರು ಮಾತ್ರ ಆನಂತರ ಮಾಡುತ್ತೇವೆ ಎಂದು ಹೇಳಿದ್ದರು ಆದರೆ ಎಲ್ಲ ಮಾಲೀಕರು ನನಗೆ ಪಾವರ್ ಆಫ್ ಅಟಾರ್ನಿಯನ್ನು ಸಂಚಕಾರ ಪತ್ರದ ಸಮಯದಲ್ಲಿ ಬರೆದುಕೊಟ್ಟಿದ್ದರು ಹಾಗೂ ಅದಕ್ಕೆ ಎಲ್ಲರೂ ಸಹಿ ಮಾಡಿದ್ದಾರೆ. ಜಿಪಿಎ ಕೊಟ್ಟವರು ಸಂಚಕಾರ ಪತ್ರಕ್ಕೆ ಸಹಿ ಮಾಡಬಹುದಿತ್ತಲ್ಲವೇ ಎಂದರೆ ಊರಲ್ಲಿ ಇರಲಿಲ್ಲವಾದ್ದರಿಂದ ಆನಂತ ಸಂಚಕಾರ ಪತ್ರ

ಸಹಿ ಮಾಡುವುದಾಗಿ ಹೇಳಿದ್ದರು ಎಂದು ನುಡಿಯುತ್ತೇನೆ. ಹಾಗಿದ್ದರೆ ಜಿಪಿಎ ಯಾವ ಉದ್ದೇಶಕ್ಕೆ ಕೊಟ್ಟಿದ್ದರು ಎಂದರೆ ಮಾನ್ಯ ಹೈಕೋರ್ಟಿನಲ್ಲಿ ಕೇಸ್ ಇದ್ದ ಕಾರಣ ೀ್ ಅಗ್ರೀಮೆಂಟ್ ಪ್ರಕಾರ ಸೇಲ್ ಮಾಡಲು ಅಥವಾ ಬೇರೆ ಯಾರಿಗಾದರೂ ಹಸ್ತಾಂತರ ಮಾಡಲು ಅದೇ ಸಂಚಕಾರ ಬರೆಸಿಕೊಂಡು ಅಧಿಕಾರ ಕೊಟ್ಟಿದ್ದರು ಎಂದು ನುಡಿಯುತ್ತೇನೆ. 1 ರಿಂದ 9 ನೇ ಪ್ರತಿವಾದಿನೇ ವಿರುದ್ಧ 1993 ದಿಂದ 2003 ರವರೆಗೆ ಯಾವುದೇ ಕ್ರಮವನ್ನು ಕೈಗೊಂಡಿಲ್ಲ ಎಂದರೆ ಪ್ರಕರಣ ಮಾನ್ಯ ಹೈಕೋರ್ಟಿನಲ್ಲಿ ನಡೆಯುತ್ತಿದ್ದ ಕಾರಣ ಯಾವುದೇ ತೀರ್ಮಾನ ಕೈಗೊಳ್ಳುವುದು ಸೂಕ್ತವಲ್ಲ ಎಂದು ಸುಮ್ಮನಿದ್ದೆ ಹಾಗೂ ಕರಾರಿನ ಒಂದು ಶರತ್ತು ಪ್ರಕಾರ ಕೋರ್ಟಿನ ತೀರ್ಮಾನ ಬಂದ ನಂತರ ಅಥವಾ ಅದ್ಯಾಪಕ ಕೋ ಆಪರೇಟಿವ್ ಸೊಸೈಟಿ ಜೊತೆ ರಾಜೀ ಮಾಡಿಕೊಂಡ ನಂತರ ಹಾಗೂ ಇವೆರೆಡರಲ್ಲಿ ಯಾವುದು ಮೊದಲು ಆಗುತ್ತದೆಯೋ ಅದು ಆದ ನಂತರ ಖರೀದಿ ಪತ್ರ ಬರೆದುಕೊಡುವುದಾಗಿ ಹೇಳಿದ್ದರು ಎಂದು ನುಡಿಯುತ್ತೇನೆ. ಮಾನ್ಯ ಹೈಕೋರ್ಟಿನಲ್ಲಿದ್ದ ಕೇಸ್ ಯಾವ ವರ್ಷದಲ್ಲಿ ನಿಕಾಲಿಯಾಯಿತು ಎಂದರೆ 2000 ನೇ ಇಸ್ವಿಯಲ್ಲಿ ಆಯಿತು ಎಂದು ನನಗೆ ನಂತರ ತಿಳಿದುಬಂತು ಆದರೆ 1 ರಿಂದ 9 ನೇ ಪ್ರತಿವಾದಿಯರು ನನಗೆ ಅದನ್ನು ಕರಾರಿನ ಶರತ್ತು ಪ್ರಕಾರ ತಿಳಿಸಲಿಲ್ಲ ಎಂದು ನುಡಿಯುತ್ತೇನೆ. ಸಾಕ್ಷಿ ಸ್ವತಃ ನುಡಿಯುತ್ತಾರೆ ಪ್ರತಿವಾದಿ ನಂ.1 ರಿಂದ 9 ರವರು ಬೇರೆದವರಿಗೆ ಸ್ವತ್ತು ಮಾರಾಟ ಮಾಡಿದ್ದು ನಮಗೆ ಗೊತ್ತಿರಲಿಲ್ಲ ಹಾಗೂ ಅದು ತಿಳಿದುಬಂದ ತಕ್ಷಣವೇ ನಾವು ನ್ಯಾಯಾಲಯಕ್ಕೆ ಬಂದು ಕೇಸ್ ದಾಖಲಿಸಿದ್ದೇವೆ. ಪ್ರತಿವಾದಿ ನಂ.1 ರಿಂದ 9 ರವರು ಸೂಕ್ತ ರಿಪ್ಲೈ ನೋಟೀಸ್ ಕಳುಹಿಸಿದ್ದಾರೆ ಎಂದರೆ ನೋಟೀಸ್ ಕಳುಹಿಸಿದ್ದಾರೆ ಎಂದು ನುಡಿಯುತ್ತೇನೆ. ಆ ರಿಪ್ಲೈ ನೋಟೀಸ್ನಲ್ಲಿ ನಾನು ಪ್ರತಿಪಾದಿಸಿರುವ ಸಂಚಕಾರ ಪತ್ರವನ್ನು ಅವರು ಒಪ್ಪಿಕೊಂಡಿಲ್ಲ ಎಂದರೆ ನಿಜ. ಸಾಕ್ಷಿ ಸ್ವತಃ ನುಡಿಯುತ್ತಾರೆ ಒಪ್ಪಿಕೊಳ್ಳುತ್ತಿಲ್ಲ ಎಂದು ಸುಳ್ಳು ಹೇಳಿದ್ದಾರೆ, ತಕ್ಷಣ ನಾನು ಕೇಸ್ ದಾಖಲಿಖ್ಲಿಸಬಹುದಿತ್ತು ಎಂದರೆ ಸಾಕಷ್ಟು ಸಾರಿ ನಂತರ ನಾನು ಅವರನ್ನು ಬೇಟಿಯಾಗಿದ್ದೆ ಹಾಗೂ ಅವರು ಕೇಳಿದಷ್ಟು ದುಡ್ಡು ನಾನು ಕೊಡುತ್ತಿಲ್ಲ ಎಂದು ಅವರು ತಕರಾರು ಮಾಡಿದ್ದರು ಹಾಗು ಅಗ್ರೀಮೆಂಟ್ ಪ್ರಕಾರ ದುಡ್ಡು ಕೊಡುತ್ತಿರುವುದಾಗಿ ನಾನು ಹೇಳಿದ್ದೆ ಹಾಗೂ ನಾನು ಭೇಟಿಯಾದಾಗಲೆಲ್ಲ ನ್ಯಾಯಾಲಯದಲ್ಲಿ ಕೇಸ್ ಇದೆ ಇನ್ನೂ ತೀರ್ಮಾನ ಬಂದಿಲ್ಲ ಮತ್ತು ತೀರ್ಮಾನ ಬಂದ ಕೂಡಲೆ ದಾಖಲೆ ಮಾಡಿಕೊಡುತ್ತೇನೆ ಎಂದು ಅವರು ಹೇಳುತ್ತಿದ್ದರು,

ಆದರೆ ತೀರ್ಮಾನ ಬಂದಿದೆ ಎಂಬುದನ್ನು ತಿಳಿಸಿರಲಿಲ್ಲ. ಆ ರೀತಿ ಕಾನೂನುಬದ್ಧ ನೋಟೀಸ್ ಬಂದ ನಂತರ ಮೌಖಿಕವಾಗಿ ಮಾತನಾಡಿರುವುದು ಎಂದು ಹೇಳುತ್ತಿರುವುದೇ ಎಂದು ಕೇಳಿದರೆ ಹೌದು ಎಂದು ನುಡಿಯುತ್ತೇನೆ. ಪ್ರತಿವಾದಿ ನಂ.10 ರಿಂದ 12 ರವರಿಗೆ ದಾವಾ ಸ್ವತ್ತುಗಳ ಮೇಲೆ ಮಾಲ್ಕೀ ಹಕ್ಕು ಯಾವುದೂ ಉಳಿದಿಲ್ಲ ಎಂದರೆ ಆ ರೀತಿ ಯಾರಿಗೂ ಮಾರಾಟ ಮಾಡಬಾರದು ಎಂದು ನಾವು ದಾವೆಯಲ್ಲಿ ಪ್ರತಿಬಂಧಕಾಜ್ಞೆ ಪಡೆದುಕೊಂಡಿದ್ದೇವೆ ಹಾಗೂ ಅದಕ್ಕೂ ವಿರುದ್ಧವಾಗಿ ಮಾರಾಟ ಮಾಡಿದ್ದರೆ ಅದು ಕಂಟೆಪ್ಟ್ ಆಫ್ ಕೋರ್ಟ ಆಗುತ್ತದೆ ಎಂದು ನುಡಿಯುತ್ತೇನೆ. ಆ ರೀತಿ ತಡೆಯಾಜ್ಞೆ ನ್ಯಾಯಾಲಯ ನೀಡಿದೆಯೇ ಎಂದು ಕೇಳಿದರೆ ಬಹುಶಃ ಮಾನ್ಯ ಹೈಕೋರ್ಟನಲ್ಲಿ ಆ ರೀತಿ ಆದೇಶ ಆಗಿರುವುದು ಎಂದು ನುಡಿಯುತ್ತೇನೆ. ಅದಕ್ಕೂ ಮೊದಲು ಯಾವುದೇ ತಡೆಯಾಜ್ಞೆ ಇರಲಿಲ್ಲ ಎಂದರೆ ನೆನಪಿಲ್ಲ. ಸಾಕ್ಷಿ ಪುನಃ ನುಡಿಯುತಾತ್ರೇ ಅದೇ ನ್ಯಾಯಾಲಯದಲ್ಲಿ not to alienate and if has be to alienated must inform the court ಎಂದು ಆದೇಶ ಆಗಿತ್ತು. ಆ ರೀತಿ ವಿಚಾರಣಾ ನ್ಯಾಯಾಲಯ ದಲ್ಲಿ ಯಾವುದೇಆದೇಶ ಆಗಿಲ್ಲ ಎಂದರೆ ನೆನಪಿಲ್ಲ. ಮಾನ್ಯ ಹೈಕೋರ್ಟನಲ್ಲಿ ಮೇಲ್ಮನವಿ ಸಲ್ಲಿಸಿದ್ದು ಯಾವ ವರ್ಷ ಎಂದು ಹೇಳಲು ನೆನಪಿಲ್ಲ. ನಾನು ಕಂಟೆಪ್ಟ್ ಆಫ್ ಕೋರ್ಟ ಎಂದು ಯಾವುದಾದರೂ ಅರ್ಜಿಯಲ್ಲಿ ಸಲ್ಲಿಸಿದ್ದೇನೆಯೇ ಎಂದರೆ ಇದುವರೆಗೂ ಸಲ್ಲಿಸಿಲ್ಲ ಎಂದು ನುಡಿಯುತ್ತೇನೆ. ಖರೀದಿದಾರರನ್ನು ಪಾರ್ಟಿಯಾಗಿ ದಾವೆಯಲ್ಲಿ ಸೇರಿಸಿದ್ದೇನೆಯೇ ಎಂದರೆ ಇದುವರೆಗೂ ಮಾಡಿಲ್ಲ ಎಂದು ನುಡಿಯುತ್ತೇನೆ. 13 ನೇ ಪ್ರತಿವಾದಿ ರವರಿಗೆ ಸಂಬಂಧಪಟ್ಟ 627/3 ಕುರಿತಂತೆ 2021 ರಲ್ಲಿ ತಿದ್ದುಪಡಿಯನ್ನು ದಾವಾ ಪತ್ರ ಕುರಿತಂತೆ ಕೇಳಿರುವುದು ಹಾಗೂ ಅದಕ್ಕೂ ಮೊದಲು 2000 ರಲ್ಲಿ ಸದರಿ ಖರೀದಿ ಪತ್ರಗಳು ಆಗಿದ್ದವು ಎಂದರೆ ನಿಜ. 13 ನೇ ಪ್ರತಿವಾದಿ 627/3 ರಲ್ಲಿ ಎಷ್ಟು ಎಕರೆ ಖರೀದಿ ಮಾಡಿದ್ದಾರೆ ಎಂದರೆ ಹೇಳಲು ನೆನಪಿಲ್ಲ. ತಿದ್ದುಪಡಿ ಮೂಲಕ ಖರೀದಿ ಪತ್ರದ ಕುರಿತಂತೆ ಮಾಗಣೆ ಮಾಡಿರುವುದನ್ನು ತಿಳಿದುಕೊಂಡಿದ್ದೇನೆಯೇ ಎಂದರೆ ಹೌದು ಎಂದು ನುಡಿಯುತ್ತೇನೆ. 4 ಎಕರೆ 10 ಗುಂಟೆ ಪೈಕಿ 2 ಎಕರೆ 5 ಗುಂಟೆಯನ್ನು ಮಾತ್ರ ಪ್ರತಿವಾದಿ ನಂ.13 ಖರೀದಿ ಮಾಡಿರುವುದು ಎಂದರೆ ಅವರೆಲ್ಲರೂ ಪಾರ್ಟ್ನರ್ ಗಳು ಹಾಗೂ 10 ರಿಂದ 13 ನೇ ಪ್ರತಿವಾದಿಗಳು ಎಲ್ಲರೂ ಕೂಡಿ ಪೂರ್ತಿ ವಿಸ್ತೀರ್ಣವನ್ನು ಖರೀದಿ ಮಾಡಿದ್ದಾರೆ ಎಂದು

ನುಡಿಯುತ್ತೇನೆ. ತಿದ್ದುಪಡಿ ಅರ್ಜಿ ಸಲ್ಲಿಸುವ ಸಮಯ ಸ್ವತ್ತಿನ ಸ್ಥಿತಿ ಅದೇ ಸ್ಥಿತಿಯಲ್ಲಿತ್ತೇ ಎಂದು ಪರಿಶೀಲಿಸಿದ್ದೇನೆಯೇ ಎಂದು ಕೇಳಿದರೆ ಹೌದು ಎಂದು ನುಡಿಯುತ್ತೇನೆ. ಆ ರೀತಿ ತಿದ್ದುಪಡಿ ಮಾಗಣಿ ಸೇರಿಸುವ ಸಮಯ ಸದರಿ ಜಮೀನು ಎನ್ ಎ., ಆಗಿ, ಲೇಔಟ್ ಆಗಿ ಪ್ಲಾಟುಗಳೂ ಆಗಿ ಬೇರೆ ಬೇರೆಯವರಿಗೆ ಖರೀದಿ ಪತ್ರ ಆಗಿಹೋಗಿತ್ತು ಎಂದರೆ ಆ ರೀತಿ ಮಾರಾಟ ಮಾಡಬಾರದು ಎಂದು ನ್ಯಾಯಾಲಯದ ಆದೇಶ ಇತ್ತು ಎಂದು ನುಡಿಯುತ್ತೇನೆ. ಈಗಲಾದರೂ ಆ ರೀತಿ ಪ್ಲಾಟುಗಳು ಬೇರೆ ಬೇರೆಯವರ ಹೆಸರಿನಲ್ಲಿ ಖಾತೆ ಆಗಿರುವುದು ಹಾಗೂ ಖರೀದಿ ಪತ್ರ ಆಗಿರುವುದು ನನಗೆ ಗೊತ್ತಿದೆ ಎಂದರೆ ಮೂಲತಃ ಯಾರಿಗೆ ಮಾರಾಟ ಮಾಡಿದ್ದಾರೆಯೋ ಅವರನ್ನು ಪಕ್ಷಗಾರರಾಗಿ ಸೇರಿಸಿದ್ದೇನೆ ನಂತರ ಖರೀದಿದಾರರು ಪುನಃ ಸ್ವತ್ತು ಮಾರಾಟ ಮಾಡಿದರೆ ಅದು ತಪ್ಪಾಗುತ್ತದೆ ಎಂದು ನುಡಿಯುತ್ತೇನೆ. ಆ ರೀತಿ ಮಾರಾಟ ಮಾಡಿದರ ಕುರಿತಂತೆ ಯಾವುದೇ ಕ್ರಮವನ್ನು ನಾನು ತೆಗೆದುಕೊಂಡಿಲ್ಲ ಎಂದರೆ ಇನ್ನೂ ಮುಂದೆ ಕ್ರಮ ತೆಗೆದುಕೊಳ್ಳುತ್ತೇನೆ ಎಂದು ನುಡಿಯುತ್ತೇನೆ. ನನ್ನ ಖರೀದಿ ಸಂಚಕಾರ ಪತ್ರವು ಕಾನೂನುಬದ್ಧವಾಗಿಲ್ಲ ಎಂದರೆ ಸರಿಯಲ್ಲ. ವಿವಾದಿತ ಜಿಪಿಎ ಕೂಡ ಕಾನೂನುಬದ್ಧ ಇಲ್ಲ ಎಂದರೆ ಸರಿಯಲ್ಲ. ಜಿಪಿಎ ಪ್ರತಿಯನ್ನು ಕೂಡ ಈ ದಾವೆಯಲ್ಲಿ ಹಾಜರಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಸಲ್ಲಿಸಿರುವ ದಾಖಲೆಗಳು ಕಾನೂನುಬದ್ಧವಾಗಿಲ್ಲ ಎಂದು ವಿಚಾರಣೆ ನ್ಯಾಯಾಲಯದಲ್ಲಿ ನನಗೆ ತಡೆಯಾಜ್ಞೆ ಲಭಿಸಿರಲಿಲ್ಲ ಎಂದರೆ ಸರಿಯಲ್ಲ. 13 ನೇ ಪ್ರತಿವಾದಿ ವಿರುದ್ಧ ಮಾಡಿರುವ ತಿದ್ದುಪಡಿಯು ಕಾಲಪರಿಮಿತಿ ಮೀರಿ ಮಾಡಿರುವ ತಿದ್ದುಪಡಿ ಹಾಗೂ ಅದು ಕಾನೂನುಬದ್ಧವಾಗಿಲ್ಲ ಹಾಗೂ ಅದರಲ್ಲಿ ಕೇಳಿರುವುದನ್ನು ಪಡೆದುಕೊಳ್ಳುವ ಹಕ್ಕು ನನಗಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ನುಡಿಯುತ್ತಾರೆ ನನಗೆ ಮಾಹಿತಿ ಲಭಿಸಿದ ತಕ್ಷಣ ನಾನು ನ್ಯಾಯಾಲಯಕ್ಕೆ ಬಂದಿದ್ದೇನೆ ಹಾಗೂ ಕಾಲಪರಿಮಿತಿ ಮೀರಿಲ್ಲ. ಮೂಲ ದಾವೆ ಸಲ್ಲಿಸುವಾಗಲೂ ಕೂಡ ಅವಧಿ ಮೀರಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ನುಡಿಯುತ್ತಾರೆ ಮಾರಾಟ ಮಾಡಿದ್ದಾರೆ ಎಂದು ಅವರು ಹೇಳಿರುವುದು ಗೊತ್ತಾದ ತಕ್ಷಣ ನ್ಯಾಯಾಲಯ ಕ್ಕೆ ಬಂದಿದ್ದೇವೆ. ನೊಂದ ಆದ ದಾಖಲೆಗಳ ಕುರಿತಂತೆ ಮಾಹಿತಿಯು ಎಲ್ಲ

ಜನರಿಗೂ ಲಭಿಸುತ್ತೆ ಎಂದರೆ ನಿಜ. ಎಲ್ಲ ಮಾಹಿತಿ ಗೊತ್ತಿದ್ದರೂ ಕೂಡ ನೊಂದ ಖರೀದಿ ಪತ್ರದ ಬಗ್ಗೆ **13** ನೇ ಪ್ರತಿವಾದಿ ಮೂಲ ಪ್ರಾರ್ಥನೆಯಲ್ಲಿ ಯಾವುದೇ ಮಾಗಣಿ ಮಾಡಿಲ್ಲ ಎಂದರೆ ಸರಿಯಲ್ಲ.

ವಿವಾದಿತ ಒಪ್ಪಂದವು **1** ರಿಂದ **9** ನೇ ಪ್ರತಿವಾದಿ ಯರ ಜೊತೆ ಆಗಿರುವುದು ಎಂದು ನಾನು ಹೇಳಿರುವುದು ಎಂದರೆ ನಿಜ. ಪ್ರತಿವಾದಿ ನಂ.**10** ರಿಂದ **13** ನನ್ನ ಒಪ್ಪಂದಕ್ಕೆ ಯಾವುದೇ ರೀತಿ ಸಂಬಂಧಪಟ್ಟಿಲ್ಲ ಎಂದರೆ ಅವರು ಮೂಲ ಒಪ್ಪಂದಕ್ಕೆ ಸಹಿ ಮಾಡಿರುವ ಪಕ್ಷಗಾರರಿಂದ ಖರೀದಿ ಹಿಡಿದಿದ್ದು ಹಾಗೂ ಅದು ತಪ್ಪು ಹಾಗೂ ಆ ಕಾರಣದಿಂದ ಅವರನ್ನು ಪಕ್ಷಗಾರರನ್ನಾಗಿ ಮಾಡಿದ್ದು ಎಂದು ನುಡಿಯುತ್ತೇನೆ. ಸದರಿ ಸಂಚಕಾರ ಹಣವನ್ನು ನನಗೆ ವಾಪಸ ಕೊಡಿಸಬೇಕೆಂದು ಕೂಡ ಮಾಗಣಿ ಕೇಳಿದ್ದೇನೆ ಎಂದರೆ ನಿಜ. ಆ ಮಾಗಣಿಗೆ 10 ರಿಂದ 13 ನೇ ಪ್ರತಿವಾದಿಯರು ಸಂಬಂಧಪಡುವುದಿಲ್ಲ ಎಂದರೆ ಅದನ್ನು ನ್ಯಾಯಾಲಯ ಹೇಳುತ್ತೆ ಎಂದು ನುಡಿಯುತ್ತೇನೆ. 10 ರಿಂದ 13 ನೇ ಪ್ರತಿವಾದಿಯರನ್ನು ಈ ದಾವೆಯಲ್ಲಿ ವಿನಾ ಕಾರಣ ಸೇರಿಸಿ ಅವರಿಗೆ ತೊಂದರೆ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ನುಡಿಯುತ್ತಾರೆ ಮೇಲ್ಮನವಿ ನ್ಯಾಯಾಲಯವರೆಗೆ ಹೋಗಿ ಆ ರೀತಿ ಪಕ್ಷಗಾರರಾಗಿ ಸೇರಿಸುವಂತೆ ಆದೇಶವನ್ನು ಪಡೆದುಕೊಳ್ಳಲಾಗಿದೆ. ಸಾಕ್ಷಿ ಸ್ವತಃ ನುಡಿಯುತ್ತಾರೆ ಅವರು ಈ ಕೇಸಿಗೆ ಪಾರ್ಟಿ ಬೇಕೇ ಬೇಕಾಗಿರುವುದರಿಂದ ಆ ರೀತಿ ಆದೇಶವಾಗಿದೆ. ಮೇಲ್ಮನವಿಯಲ್ಲಿ ನಾನು ಹೇಳಿರುವಂತೆ ಹೆಚ್ಚುವರಿ ಪಕ್ಷಗಾರರನ್ನು ಸೇರಿಸಬೇಕೆಂದು ಆದೇಶ ಆಗಿಲ್ಲ ಎಂದರೆ ಸರಿಯಲ್ಲ. ಪೂರ್ತಿ ದಾವೆ ವಜಾ ಅಗಿದ್ದರ ವಿರುದ್ಧ ನಾನು ಮೇಲ್ಮನವಿ ಸಲ್ಲಿಸಿದ್ದು ಎಂದರೆ ನಿಜ. 1 ರಿಂದ 9 ನೇ ಪ್ರತಿವಾದಿರ ವಿರುದ್ಧ ಕ್ರಮ ಆಗಬೇಕು ಎಂದು ಆ ಮೇಲ್ಮನವಿ ಪುರಸ್ಕೃತಗೊಂಡಿದ್ದು ಎಂದರೆ ಸರಿಯಲ್ಲ. 13 ನೇ ಪ್ರತಿವಾದಿ ವಿರುದ್ಧ ಮಾಡಿರುವ ಮಾಗಣಿ ಕಾಲಪರಿಮಿತಿಯಿಂದ ಬಾಧಿತವಾಗಿದೆ ಎಂದರೆ ಸರಿಯಲ್ಲ. ಆ ರೀತಿ ಕಾಲಪರಿಮಿತಿಯನ್ನು ವಿಚಾರಣಾ ನ್ಯಾಯಾಲಯವು ಪರಿಗಣಿಸತಕ್ಕದ್ದು

ಎಂದೂ ಕೂಡ ಮಾನ್ಯ ಮೇಲ್ಮನವಿ ನ್ಯಾಯಾಲಯ ಹೇಳಿದೆ ಎಂದರೆ ಸರಿಯಲ್ಲ. 10 ರಿಂದ 13 ನೇ ಪ್ರತಿವಾದಿಯರು ಈ ದಾವೆಗೆ ಯಾವುದೇ ರೀತಿ ಸಂಬಂಧಪಡುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

Sd/-

ಒಂದನೇ ಹಿರಿಯ ಸಿವಿಲ್ ನ್ಯಾಯಾಧೀಶರು,
ಹಾಗೂ ಜೆಎಂಎಫ್ ಸಿ , ಹುಬ್ಬಳ್ಳಿ.